ಮಣಿಮಂಜರ್ಯಾಂ ತೃತೀಯಃ ಸರ್ಗಃ

ಹಿಮಾಂಶೋರತ್ರಿಪುತ್ರಸ್ಯ ಬುಧೋ ನಾಮ ಸುತೋಽಭವತ್ |
ಪುರೂರವಾ ಮಹಾರಾಜಸ್ತಸ್ಯ ಪುತ್ರೋ ವ್ಯಜಾಯತ ||1||

ತಾತ್ಪರ್ಯ : ಶ್ರೀ ನಾರಾಯಣ ಪಂಡಿತರು ಪ್ರಥಮ ಸರ್ಗ ಹಾಗೂ ದ್ವಿತೀಯ ಸರ್ಗಗಳಲ್ಲಿ ಶ್ರೀ ರಾಮನ ಪವಿತ್ರ ಚರಿತ್ರೆಯನ್ನು ತಿಳಿಸಿದರು. ಈಗ ತೃತೀಯ ಸರ್ಗದಲ್ಲಿ ಮಹಾಭಾರತ ಹಾಗೂ ಭಾಗವತದಲ್ಲಿ ಬಂದ ಶ್ರೀ ಕೃಷ್ಣನ ಚರಿತ್ರೆಯನ್ನು ನಿರೂಪಿಸುತ್ತಿದ್ದಾರೆ. ಶ್ರೀಕೃಷ್ಣ ಚಂದ್ರವಂಶದಲ್ಲಿ ಅವತರಿಸಿರುವುದರಿಂದ ಚಂದ್ರನಿಂದ ಪ್ರಾರಂಭಿಸಿ ವಸುದೇವನ ತನಕದ ವಂಶಾನುವರ್ಣನೆಯನ್ನು ಪ್ರಾರಂಭದ 15 ಶ್ಲೋಕದಲ್ಲಿ ಮಾಡಿದ್ದಾರೆ.
ಅತ್ರಿ ಮಹರ್ಷಿಗೆ ಅನುಸೂಯೆಯಲ್ಲಿ ಚಂದ್ರ ಹುಟ್ಟಿದ. ಚಂದ್ರನಿಗೆ ತಾರೆಯಲ್ಲಿ ಬುಧ ಜನಿಸಿದ. ಬುಧನ ಮಗ ಮಹಾರಾಜನಾದ ಪುರೂರವಸ್ಸು.

ತಸ್ಯಾಯುರಭವತ್ ಪುತ್ರೋ ನಹುಷಸ್ತಸ್ಯ ನಂದನಃ |
ಯಯಾತಿರಭವತ್ತಸ್ಯ ನಂದನೋ ಬಲವೀರ್ಯವಾನ್ ||2||

ತಾತ್ಪರ್ಯ : ಆ ಪುರೂರವಸ್ಸನ ಮಗ ಆಯು, ಆಯುರಾಜನ ಮಗ ನಹುಷ. ನಹುಷನ ಮಗ ಮಹಾಪರಾಕ್ರಮಿಯಾದ ಯಯಾತಿ.

ದೇವಯಾನೀಂ ಚ ಶರ್ಮಿಷ್ಠಾಂ ಸ ಉವಾಹ ಪ್ರಿಯೇ ಉಭೇ |
ಪ್ರಥಮೋಶನಸಃ ಪುತ್ರೀ ದ್ವಿತೀಯಾ ವೃಷಪರ್ವಣಃ ||3||

ತಾತ್ಪರ್ಯ : ಯಯಾತಿರಾಜನಿಗೆ ಇಬ್ಬರು ಹೆಂಡಂದಿರು. ಒಬ್ಬಾಕೆ ಶುಕ್ರಾಚಾರ್ಯರ ಮಗಳಾದ ದೇವಯಾನಿ. ಮತ್ತೊಬ್ಬಳು ವೃಷಪರ್ವರಾಜನ ಮಗಳಾದ ಶರ್ಮಿಷ್ಠೆ.

ಯದುಂ ಚ ತುರ್ವಸುಂ ಚೈವ ದೇವಯಾನ್ಯಾಮಜೀಜನತ್ |
ದ್ರುಹ್ಯಂ ಚಾನುಂ ಚ ಪೂರುಂ ಚ ಶರ್ಮಿಷ್ಠಾಯಾಮಜೀಜನತ್ ||4||

ತಾತ್ಪರ್ಯ : ಯಯಾತಿರಾಜನಿಗೆ ಒಟ್ಟು ಐವರು ಮಕ್ಕಳು. ಯದು, ತುರ್ವಸು, ದ್ರುಹ್ಯ, ಅನು ಹಾಗೂ ಪೂರು (ಪುರು). ಇವರಲ್ಲಿ ಯದು ಮತ್ತು ತುರ್ವಸು ದೇವಯಾನಿಯಲ್ಲಿ ಜನಿಸಿದರು.ದ್ರುಹ್ಯ, ಅನು ಮತ್ತು ಪೂರು ಶರ್ಮಿಷ್ಠೆಯಲ್ಲಿ ಜನಿಸಿದರು.

ಯದೋರ್ವಂಶೇ ತು ರಾಜಾನಃ ಕಾರ್ತವೀರ್ಯಪುರೋಗಮಾಃ |
ಬಭೂವುರ್ಭಗವದ್ಭಕ್ತಾಸ್ತಪೋಜ್ಞಾನಪರಾಯಣಾಃ ||5||

ತಾತ್ಪರ್ಯ : ಯಯಾತಿಯ ಐವರು ಮಕ್ಕಳಲ್ಲಿ ಯದುರಾಜ ಮತ್ತು ಪೂರುರಾಜರಿಂದ ಚಂದ್ರವಂಶವು ಎರಡು ಕವಲಾಗಿ ಬೆಳೆಯಿತು. ಯದುರಾಜನ ವಂಶದಲ್ಲಿ ಭಗವದ್ಭಕ್ತರಾದ ತಪೋಜ್ಞಾನಪರಾಯಣರಾದ ಕೃತವೀರ್ಯ, ಕಾರ್ತವೀರ್ಯ, ಮೊದಲಾದವರು ಜನಿಸಿದರು.ಇದೇ ಯದುವಂಶ.

ಪೂರೋರ್ವಂಶೇ ತು ರಾಜಾನ ಆಸನ್ ದೌಷ್ಯಂತಿಪೂರ್ವಕಾಃ |
ತೇಷಾಂ ಕೀರ್ತ್ಯಾ ಚ ವಿಕ್ರಾಂತ್ಯಾ ಸಮಸ್ತಾಃ ಪೂರಿತಾ ದಿಶಃ ||6||

ತಾತ್ಪರ್ಯ : ಯದುವಂಶವನ್ನು ಹೇಳಿ ಪುರುವಂಶದ ವಿಸ್ತಾರವನ್ನು ಹೇಳುತ್ತಿದ್ದಾರೆ. ಪುರುರಾಜನ ವಂಶದಲ್ಲಿ ದುಷ್ಯಂತ ಭರತ ಮೊದಲಾದ ರಾಜರು ಜನಿಸಿದರು. ಇವರೆಲ್ಲರೂ ಅಮಿತ ಪರಾಕ್ರಮಿಗಳು. ಇವರ ಕೀರ್ತಿ ಎಲ್ಲಾ ದಿಕ್ಕುಗಳಲ್ಲಿ ಹಬ್ಬಿತು.

ಭೂಭಾರಹರಣಾಪೇಕ್ಷಾಸ್ತಸ್ಮಿನ್ ಕಾಲೇ ದಿವೌಕಸಃ |
ದುಗ್ಧಾಬ್ಧಿಶಾಯಿನಂ ವಿಷ್ಣುಂ ಶರಣ್ಯಂ ಶರಣಂ ಯಯುಃ ||7||
ತಾತ್ಪರ್ಯ : ದ್ವಾಪರಯುಗದಲ್ಲಿ ರಾಕ್ಷಸರ ಉಪಟಳ ಜಾಸ್ತಿಯಾಯಿತು. ಭೂಮಿಗೆ ಭಾರಭೂತರಾದ ರಾಕ್ಷಸರನ್ನು ನಾಶಮಾಡುವ ಅಪೇಕ್ಷೆಯಿಂದ ದೇವತೆಗಳು ಕ್ಷೀರಸಾಗರಶಾಯಿಯಾದ ಶ್ರೀಮನ್ನಾರಾಯಣನನ್ನು ಶರಣು ಹೊಕ್ಕರು.

ವಿಪ್ರಕ್ಷತ್ರಾದಿಭಾವೇನ ತದಾದಿಷ್ಟಾಸ್ಸುರಾದಯಃ |
ಬಭೂವುರ್ಭುವಿ ತತ್ಸೇವಾಂ ವಿಧಿತ್ಸಂತಸ್ಸಮಸ್ತಶಃ ||8||
ತಾತ್ಪರ್ಯ : ದೇವತೆಗಳ ಪ್ರಾರ್ಥನೆಯನ್ನು ಅಂಗೀಕರಿಸಿದ ಶ್ರೀ ಮಹಾವಿಷ್ಣು ಅವತರಿಸಲು ಸಂಕಲ್ಪಿಸಿ ದೇವತೆಗಳಿಗೆ ಭೂಮಿಯಲ್ಲಿ ಅವತರಿಸುವಂತೆ ಆದೇಶಿಸಿದನು. ಹೀಗೆ ಆದಿಷ್ಟರಾದ ದೇವತೆಗಳು ಇದೊಂದು ಭಗವತ್ಸೇವೆಯ ಸದವಕಾಶವೆಂದು ಭಾವಿಸುತ್ತಾ ದ್ರೋಣ, ಅಶ್ವತ್ಥಾಮ ಮೊದಲಾದ ಬ್ರಾಹ್ಮಣರಾಗಿ ಹಾಗೂ ಶಂತನು, ಭೀಷ್ಮಮೊದಲಾದ ಕ್ಷತ್ರಿಯರಾಗಿ ಭೂಮಿಯಲ್ಲಿ ಅವತರಿಸಿದರು.

ವರುಣಶ್ಶಂತನುರ್ನಾಮ ಪೂರೋರ್ವಂಶೇ ವ್ಯಜಾಯತ |
ವಿಚಿತ್ರವೀರ್ಯಸ್ತಸ್ಯಾಸೀತ್ ಪುತ್ರಶ್ಚಿತ್ರಾಂಗದಾನುಜಃ ||9||
ತಾತ್ಪರ್ಯ : ಭೂಮಿಯಲ್ಲಿ ಅವತರಿಸಿದ ದೇವತೆಗಳಲ್ಲಿ ವರುಣನೂ ಒಬ್ಬ. ಆತ ಪುರುವಂಶದಲ್ಲಿ ಶಂತನು ಎಂಬ ಹೆಸರಿನಿಂದ ಜನಿಸಿದ. ಈ ಶಂತನುವಿಗೆ ಚಿತ್ರಾಂಗದ ಮತ್ತು ವಿಚಿತ್ರವೀರ್ಯ ಎಂಬ ಇಬ್ಬರು ಮಕ್ಕಳು. ಇವರಲ್ಲಿ ವಿಚಿತ್ರವೀರ್ಯನು ಚಿಕ್ಕವ

ಧೃತರಾಷ್ಟ್ರಶ್ಚ ಪಾಂಡುಶ್ಚ ತಸ್ಯ ಪುತ್ರೌ ಬಭೂವತುಃ |
ಪಾಂಡೋಃ ಕುಂತೀ ಚ ಮಾದ್ರೀ ಚ ದ್ವೇ ಭಾರ್ಯೇ ಧರ್ಮಕೋವಿದೇ ||10||
ತಾತ್ಪರ್ಯ : ಶಂತನುವಿನ ಇಬ್ಬರು ಮಕ್ಕಳಲ್ಲಿ ತಮ್ಮನಾದ ವಿಚಿತ್ರವೀರ್ಯನ ಮಕ್ಕಳೇ ಧೃತರಾಷ್ಟ್ರ ಮತ್ತು ಪಾಂಡು. ಪಾಂಡುವಿಗೆ ಇಬ್ಬರು ಪತ್ನಿಯರು. ಕುಂತೀ ಮತ್ತು ಮಾದ್ರೀ.

ಸ ಪಾಂಡುರ್ಮುನಿಶಾಪೇನ ಸ್ತ್ರೀಸಂಗಮಸುಖಂ ಜಹೌ|
ಭರ್ತ್ರಾಜ್ಞಯಾ ಸುತಂ ಕುಂತೀ ಧರ್ಮಾಲ್ಲೇಭೇ ಯುಧಿಷ್ಠಿರಮ್ ||11|
ತಾತ್ಪರ್ಯ : ಆ ಪಾಂಡುಮಹಾರಾಜ ಒಂದು ದಿನ ವಿಹಾರಕ್ಕಾಗಿ ತನ್ನ ಇಬ್ಬರು ಪ್ರಿಯರೊಂದಿಗೆ ಕಾಡಿಗೆ ಹೋಗಿದ್ದನು. ಕಾಡಿನಲ್ಲಿ ಜಿಂಕೆಯ ರೂಪದಲ್ಲಿದ್ದ ಋಷಿದಂಪತಿಗಳ ಮೇಲೆ ಪ್ರಮಾದದಿಂದ ಬಾಣವನ್ನು ಪ್ರಯೋಗಿಸಿದನು. ಕುಪಿತನಾದ ಕಿಂದಮನೆಂಬ ಆ ಮಹರ್ಷಿ 'ಗಂಡ ಹೆಂಡಿರಾದ ನಮ್ಮಿಬ್ಬರಲ್ಲಿ ವಿಯೋಗವುಂಟು ಮಾಡಿದ ನೀನೂ ಕೂಡ ಹೆಂಡತಿಯಿಂದ ಸುಖವನ್ನು ಪಡೆಯಬಾರದು. ಸ್ತ್ರೀಸಂಪರ್ಕವಾದ ಕೂಡಲೇ ಸತ್ತು ಹೋಗು' ಎಂದು ಶಾಪವಿತ್ತನು. ಆಗತಾನೆ ಮದುವೆಯಾಗಿದ್ದ ಅಪುತ್ರನಾದ ಪಾಂಡು ಖಿನ್ನನಾಗಿ ಸ್ತ್ರೀಸಂಗಮಸುಖವನ್ನು ಬಿಟ್ಟನು. ಪತ್ನಿಯರಲ್ಲಿ ಒಬ್ಬಳಾದ ಕುಂತಿದೇವಿ ಪಾಂಡುವಿನ ಅನುಜ್ಞೆಯನ್ನು ಪಡೆದು ದೂರ್ವಾಸರಿತ್ತಿದ್ದ ಮಂತ್ರದ ಬಲದಿಂದ ಯಮಧರ್ಮನ ದೆಸೆಯಿಂದ ಒಬ್ಬ ಮಗನನ್ನು ಪಡೆದಳು. ಯಮಾಂಶಸಂಭೂತನೇ ಯುಧಿಷ್ಠಿರ.

ಧೃತರಾಷ್ಟ್ರಸ್ಯ ಗಾಂಧಾರ್ಯಾಮಾಸನ್ ದುರ್ಯೋಧನಾದಯಃ |
ವಧಾಯ ಮಾರುತಸ್ತೇಷಾಂ ಭೀಮಂ ಕುಂತ್ಯಾಮಜೀಜನತ್ ||12||
ತಾತ್ಪರ್ಯ : ಅತ್ತ ಯುಧಿಷ್ಠಿರ ಹುಟ್ಟಿದ ಕೂಡಲೇ ಧೃತರಾಷ್ಟ್ರನಿಗೆ ಪತ್ನಿಯಾದ ಗಾಂಧಾರಿಯಲ್ಲಿ ದುರ್ಯೋಧನನೇ ಮೊದಲಾದ ನೂರೊಂದು ಮಕ್ಕಳು ಜನಿಸಿದರು. ಅವರ ಸಂಹಾರಕ್ಕಾಗಿ ವಾಯುದೇವ, ಪಾಂಡುಪತ್ನಿಯಾದ ಕುಂತೀದೇವಿಯಲ್ಲಿ ಭೀಮಸೇನನೆಂಬ ಮಗನನ್ನು ಅನುಗ್ರಹಿಸಿದ. ಅಂದರೆ ಕುಂತೀದೇವಿಯು ಎರಡನೇ ಮಂತ್ರದ ಬಲದಿಂದ ವಾಯುದೇವನ ದೆಸೆಯಿಂದ ಭೀಮನೆಂಬ ಮಗನನ್ನು ಪಡೆದಳು.

ಸಾ ಲೇಭೇ ವಾಸವಾಜ್ಜಿಷ್ಣುಂ ಯಮೌ ಮಾದ್ರೀ ಚ ದಸ್ರಯೋಃ|
ವನೇಽವರ್ಧಂತ ವತ್ಸಾಸ್ತೇ ಪಾಂಡುನಾ ಪರಿರಕ್ಷಿತಾಃ ||13||
ತಾತ್ಪರ್ಯ : ಕುಂತೀದೇವಿಯು ದೇವೇಂದ್ರನಿಂದ ಅರ್ಜುನನೆಂಬ ಮೂರನೇ ಮಗನನ್ನು ಪಡೆದಳು. ಇನ್ನೊಂದು ಬಾರಿ ಮಂತ್ರವನ್ನು ಉಪಯೋಗಿಸಬಹುದಿತ್ತು. ಆಗ ಆ ಮಂತ್ರವನ್ನು ಸವತಿ ಗೆಳತಿಯಾದ ಮಾದ್ರಿಗೆ ಕೊಟ್ಟಳು. ಮಾದ್ರಿಯು ಅಶ್ವಿನಿದೇವತೆಗಳಿಂದ ನಕುಲ, ಸಹದೇವರೆಂಬ ಅವಳಿ ಮಕ್ಕಳನ್ನು ಪಡೆದಳು. ಈ ಐದೂ ಜನ ಪಾಂಡುಸುತರು ಕಾಡಿನಲ್ಲಿ ಚೆನ್ನಾಗಿ ಬೆಳೆದರು.

ಏವಂ ಪಾಂಚಾಲಬಾಹ್ಲೀಕಾ ಅವರ್ಧಂತ ಮಹಾಬಲಾಃ |
ಆಹುಕಾದ್ಯಾದವಾದುಗ್ರಸೇನೋಽಭೂದ್ದೇವಕಸ್ತಥಾ ||14||
ತಾತ್ಪರ್ಯ : ಪುರುವಂಶ ಮಧ್ಯದಲ್ಲಿ ಕವಲೊಡೆದು ಒಂದು ಕಡೆಯಿಂದ ದ್ರುಪದ ಮೊದಲಾದ ಪಾಂಚಾಲರು ಬೆಳೆದರು. ಇನ್ನೊಂದೆಡೆಯಿಂದ ಭೂರಿಶ್ರವಸ್ಸು ಮೊದಲಾದ ಬಾಹ್ಲೀಕರು ಜನಿಸಿದರು. ಇದು ಪುರುವಂಶದ ವಿಸ್ತಾರ. ಇತ್ತ ಯದುವಂಶದಲ್ಲಿ ಆಹುಕನಿಗೆ ಉಗ್ರಸೇನ ಮತ್ತು ದೇವಕನೆಂಬ ಇಬ್ಬರು ಮಕ್ಕಳು ಹುಟ್ಟಿದರು.

ದೇವಕಸ್ಯ ಸುತಾ ಜಜ್ಞೇ ದೇವಕೀ ದೇವಸಮ್ಮತಾ |
ವಸುದೇವ ಉವಾಹೈನಾಂ ಯಾದವಶ್ಶೂರನಂದನಃ || 15 ||
ತಾತ್ಪರ್ಯ : ದೇವಕನ ಮಗಳೇ ದೇವಕಿ. ದೇವಮಾತೆಯಾದ ಅದಿತಿಯಂತೆ ದೇವತೆಗಳಿಂದ ಪೂಜ್ಯಳು. ಯದುವಂಶದವನೇ ಆದ ಶೂರನ ಮಗನಾದ ವಸುದೇವನು ಈ ದೇವಕಿಯನ್ನು ಮದುವೆಯಾದನು.

ತತ್ರ ಪ್ರಾದುರಭೂದ್ದೇವಃ ಪರಮಾತ್ಮಾ ಸನಾತನಃ |
ದಂಪತ್ಯೋರನಯೋರಾಶಾಃ ಪೂರಯನ್ ಸುರಕಾರ್ಯವಾನ್ ||16||
ತಾತ್ಪರ್ಯ : ಆ ವಸುದೇವ ದೇವಕಿಯರು ಪರಮಾತ್ಮನನ್ನು ಮಗನನ್ನಾಗಿ ಪಡೆಯಬೇಕೆಂಬ ಆಸೆ ಹೊತ್ತವರು. ಅನಾದಿನಿತ್ಯನಾದ ಪರಮಾತ್ಮನು ಈ ವಸುದೇವ ದೇವಕಿಯರಿಗೆ ಮಗನಾಗಿ ಹುಟ್ಟಿದ. ಅವರ ಆಸೆಗಳನ್ನು ಪೂರೈಸಿದನು. ಹಿಂದೆ ದೇವತೆಗಳು ಭೂಭಾರಹರಣಾಪೇಕ್ಷೆಯಿಂದ ಪ್ರಾರ್ಥಿಸಿರುವುದರಿಂದ ಆ ಭೂಭಾರಹರಣವೆಂಬ ಸುರಕಾರ್ಯವೂ ಕೂಡ ಕೃಷ್ಣಾವತಾರದ ಉದ್ದೇಶವಾಗಿದೆ.

ವಸುದೇವಸ್ಯ ರೋಹಿಣ್ಯಾಂ ತತಃ ಪೂರ್ವಮಜಾಯತ |
ಅನಂತೋ ಬಲವತ್ತ್ವೇನ ಬಲಭದ್ರ ಇತಿ ಶ್ರುತಃ ||17||

ತಾತ್ಪರ್ಯ : ವಸುದೇವನಿಗೆ ದೇವಕಿಯಲ್ಲದೇ ರೋಹಿಣಿಯೆಂಬ ಮತ್ತೊಬ್ಬ ಪತ್ನಿಯಿದ್ದಳು. ಈ ರೋಹಿಣಿಯಲ್ಲಿ ಶ್ರೀಕೃಷ್ಣ ಅವತರಿಸುವುದಕ್ಕೆ ಮೊದಲೇ ಪರಮಾತ್ಮನಿಗೆ ಹಾಸಿಗೆಯಾದ ಶೇಷದೇವನು ಮಗನಾಗಿ ಹುಟ್ಟಿದನು. ಮಹಾಬಲಶಾಲಿಯಾದ್ದರಿಂದ ಇವನು ಬಲಭದ್ರನೆಂದು ಪ್ರಸಿದ್ಧನಾದನು.

ಜ್ಞಾನಾನಂದತನುಂ ಶ್ಯಾಮಂ ಶಂಖಚಕ್ರಗದಾಧರಮ್ |
ವ್ಯಕ್ತಮಾತ್ರಂ ಹರಿಂ ದೃಷ್ಟ್ವಾ ತುಷ್ಟಾವಾನಕದುಂದುಭಿಃ ||18||
ತಾತ್ಪರ್ಯ : ವಸುದೇವನು ಮಗನಾಗಿ ಅವತರಿಸಿದ ಶ್ರೀಕೃಷ್ಣನನ್ನು ಕಂಡನು. ಜ್ಞಾನಾನಂದಗಳೇ ಅವನ ಶರೀರ. ನೀಲಮೇಘದಂತೆ ಮಿರುಗು ಕಪ್ಪಾದ ಸುಂದರ ದೇಹ. ಆ ದೇಹ ನಮ್ಮ ದೇಹದಂತಲ್ಲ. ಜ್ಞಾನಾನಂದಸ್ವರೂಪಿಯಾದ ದೇಹವದು. ನಾಲ್ಕು ಕೈಗಳಲ್ಲಿ ಶಂಖಚಕ್ರಗದಾಪದ್ಮಗಳನ್ನು ಧರಿಸಿದ್ದಾನೆ. ಇಂತಹ ಶ್ರೀಹರಿ ಸಾಮಾನ್ಯರಂತೆ ಹುಟ್ಟುವುದು ಸಾಧ್ಯವೇ? ಈತ ಹುಟ್ಟಿದ್ದಲ್ಲ. ಕೇವಲ ವ್ಯಕ್ತನಾಗಿದ್ದು. ಅಂದರೆ ಕಾಣದಿದ್ದವನು ದೇಹ ಧರಿಸಿ ಕಾಣಿಸಿಕೊಂಡದ್ದು ಅಷ್ಟೇ. ಇಂತಹ ಶ್ರೀಹರಿಯನ್ನು ಅವನಿಗೆ ತಂದೆಯಾದ ವಸುದೇವ ನಾನಾವಿಧವಾಗಿ ಸ್ತೋತ್ರ ಮಾಡಿದ.

ಸ್ವಾಜ್ಞಯಾ ಸ ವ್ರಜಂ ನೀತಃ ಕಂಸಾದ್ಭೀತೇನ ಶೌರಿಣಾ |
ಶಿಶುರೂಪೋ ಯಶೋದಾಯಾಃ ಶಾಯಿತಶ್ಶಯನೇ ಶನೈಃ ||19||
ತಾತ್ಪರ್ಯ : ಕಂಸನು ದೇವಕಿಯಲ್ಲಿ ಹುಟ್ಟಿದ ಹಿಂದಿನ ಎಲ್ಲಾ ಮಕ್ಕಳನ್ನು ಕೊಂದಿದ್ದನು. ಈಗ ಶ್ರೀಕೃಷ್ಣ ಹುಟ್ಟಿರುವುದು ತಿಳಿದಕೂಡಲೇ ಏನು ಮಾಡುವನೋ ಎಂದು ವಸುದೇವನು ಹೆದರಿದನು. ಆಗ ಸ್ವತಃ ಪರಮಾತ್ಮನೇ ತನ್ನನ್ನು ಗೋಕುಲಕ್ಕೆ ಕೊಂಡು ಹೋಗಲು ಹೇಳಿ, ತನ್ನ ಹಿಂದೆ ಹೇಳಿದ ಅದ್ಭುತ ರೂಪವನ್ನು ಮರೆಮಾಡಿ, ಚಿಕ್ಕ ಮಗುವಿನಂತೆ ತೋರಿಸಿ ಕೊಂಡನು. ಶಿಶುರೂಪಿಯಾದ ಆ ಕೃಷ್ಣನನ್ನು ವಸುದೇವನು ಹೊತ್ತುಕೊಂಡು ಗೋಕುಲಕ್ಕೆ ಹೋಗಿ ನಂದಗೋಪನ ಪತ್ನಿಯಾದ ಯಶೋದಾದೇವಿಯ ಹಾಸಿಗೆಯಲ್ಲಿ ಮಲಗಿಸಿದನು.

ಚಂಡಿಕಾಂ ತತ್ಕ್ಷಣೋದ್ಭೂತಾಂ ನೀತ್ವಾ ಯಾದವನಂದನಃ |
ದೇವಕ್ಯಾಶ್ಶಯನೇ ನ್ಯಸ್ಯ ಪೂರ್ವವದ್ ಬಂಧಮಾಯಯೌ ||20||
ತಾತ್ಪರ್ಯ : ಯಶೋದಾದೇವಿಗೆ ಆಗ ತಾನೇ ಒಂದು ಹೆಣ್ಣು ಶಿಶು ಹುಟ್ಟಿತ್ತು. ಸಾಕ್ಷಾತ್ ದುರ್ಗಾದೇವಿಯೇ ಭಗವದಾವೇಶದಿಂದ ಯಶೋದೆಯಲ್ಲಿ ಹುಟ್ಟಿದ್ದಳು. ವಸುದೇವನು ಶ್ರೀಕೃಷ್ಣನನ್ನು ಯಶೋದೆಯ ಹಾಸಿಗೆಯಲ್ಲಿ ಮಲಗಿಸಿ ಅಲ್ಲಿದ್ದ ಆಗ ತಾನೇ ಹುಟ್ಟಿದ್ದ ದುರ್ಗಾಸ್ವರೂಪಿಯಾದ ಶಿಶುವನ್ನು ಮಥುರೆಗೆ ತಂದು ದೇವಕಿಯ ಹಾಸಿಗೆಯಲ್ಲಿ ಮಲಗಿಸಿದನು. ಅಲ್ಲಿಯ ತನಕ ಕಳಚಿದ್ದ ಆತನ ಕೈಕೊಳಗಳು ಮತ್ತೆ ಬಿಗಿದುಕೊಂಡವು. ತೆರೆದಿದ್ದ ಬಾಗಿಲು ಮುಚ್ಚಿಕೊಂಡಿತು. ಮನೆಯಲ್ಲಿದ್ದ ಕಾವಲುಗಾರರು ಎಚ್ಚೆತ್ತರು. ಮಗು ಅಳತೊಡಗಿತು.

ತಾಂ ಕನ್ಯಾಂ ಕಂಸ ಆನೀಯ ನಿಹಂತುಮುಪಚಕ್ರಮೇ |
ಮೃತ್ಯುಸ್ತೇ ಜಾತ ಇತ್ಯುಕ್ತ್ವಾ ಸೋತ್ಪಪಾತ ನಭಃಸ್ಥಲಮ್ ||21||
ತಾತ್ಪರ್ಯ : ದೇವಕಿಗೆ ಎಂಟನೇ ಗರ್ಭದಲ್ಲಿ ಹೆಣ್ಣು ಮಗು ಹುಟ್ಟಿದೆ ಎಂದು ಕೇಳಿದ ಕಂಸ ಅಚ್ಚರಿಗೊಂಡು ಭಯಭೀತನಾಗಿ ಓಡಿ ಬಂದ. ಆ ಶಿಶುವನ್ನು ನೆಲಕ್ಕೆ ಅಪ್ಪಳಿಸಿ ಕೊಲ್ಲಲು ಮೇಲಕ್ಕೆ ಎತ್ತಿದ. ಮೇಲೇರಿದ್ದ ಕೈ ಕೆಳಕ್ಕಿಳಿಯುವಾಗ ಬರಿಗೈಯಾಗಿತ್ತು. ಆ ಶಿಶು

ಆಕಾಶಕ್ಕೆ ಹಾರಿಬಿಟ್ಟಿತ್ತು. ಹಾರಿಹೋಗುವಾಗ ಆ ಶಿಶು ಒಂದು ಮಾತಿನಿಂದ ಕಂಸನನ್ನು ಎಚ್ಚರಿಸಿತು. 'ದುಷ್ಟಾ! ನಿನ್ನ ಮೃತ್ಯುಸ್ವರೂಪಿ ಹುಟ್ಟಿ ಬೆಳೆಯುತ್ತಿದ್ದಾನೆ' ಎಂದು.

ಜಾತಮಾತ್ರಾನ್ ಕುಮಾರಾನ್ ಸ ನಿಹಂತುಂ ಜನಮಾದಿಶತ್ |
ಹಿಂಸಾವಿಹಾರಾ ದುಷ್ಟಾಸ್ತೇ ನಿಜಘ್ನುರ್ಭುವಿ ಬಾಲಕಾನ್ ||22||
ತಾತ್ಪರ್ಯ : ತನ್ನನ್ನು ಕೊಲ್ಲುವ ಮಗು ಹುಟ್ಟಿದೆ ಎಂದು ಕೇಳಿದ ದುರುಳ ಕಂಸ ತತ್ ಕ್ಷಣವೇ ತನ್ನ ಭಟರನ್ನು ಕರೆದು ಈಗ ತಾನೇ ಹುಟ್ಟಿರುವ ಶಿಶುಗಳನ್ನೆಲ್ಲಾ ಕೊಂದು ಹಾಕುವಂತೆ ಆದೇಶಿಸಿದನು. ಆ ಭಟರಿಗಾದರೋ ರೋಗಿಗೆ ಹಾಲು ಕೊಟ್ಟಂತಾಯಿತು. ಹಿಂಸೆಯೆಂಬುದು ಅವರಿಗೆ ಕ್ರೀಡೆ. ಕಂಸನಿಂದ ಹಿಂಸೆ ಮಾಡುವಂತೆ ಆದೇಶ ಸಿಕ್ಕಿರುವುದರಿಂದ ಹಿಗ್ಗಿದ ಆ ಪಾತಕಿಭಟರು ಊರಿನಲ್ಲೆಲ್ಲಾ ಹೋಗಿ ನವಜಾತ ಶಿಶುಗಳನ್ನು ಕೊಲ್ಲತೊಡಗಿದರು.

ಜಗಾಮ ಗೋಕುಲಂ ದುಷ್ಟಾ ಧಾತ್ರೀ ಕಂಸಸ್ಯ ಪೂತನಾ |
ಕೃಷ್ಣಮಾದತ್ತ ಸಾ ಹಂತುಂ ತಾಂ ಜಘಾನ ರಮಾಪತಿಃ ||23||
ತಾತ್ಪರ್ಯ : 'ನವಜಾತ ಶಿಶುಗಳನ್ನು ಕೊಲ್ಲಿರಿ' ಎಂಬ ಕಂಸನ ಆದೇಶವನ್ನು ಹೊತ್ತವರಲ್ಲಿ ಅವನ ಸಾಕುತಾಯಿಯಾದ ಪೂತನೆಯೂ ಒಬ್ಬಳು. ಈ ದುಷ್ಟರಾಕ್ಷಸಿ ಶಿಶುಗಳನ್ನು ಕೊಲ್ಲುತ್ತಾ ಗೋಕುಲಕ್ಕೆ ಹೋದಳು. ನಂದಗೋಪನ ಮನೆಯಲ್ಲಿದ್ದ ಕೃಷ್ಣನನ್ನು ಎತ್ತಿಕೊಂಡು ವಿಷಲಿಪ್ತವಾದ ಸ್ತನ್ಯಪಾನವನ್ನು ಮಾಡಿಸತೊಡಗಿದಳು. ಆದರೆ ಕೃಷ್ಣ ಅವಳ ರಕ್ತವನ್ನೇ ಹೀರಿ ಕೊಂದು ಬಿಟ್ಟನು.

ಶಾಯಿತಶ್ಯಕಟಸ್ಯಾಧಶ್ಶಕಟಾಕ್ಷಂ ಜಘಾನ ಸಃ |
ಅಮೀಮರತ್ ತೃಣಾವರ್ತಂ ತೇನೋನ್ನೀತಸ್ಯ ಲೀಲಯಾ ||24||
ತಾತ್ಪರ್ಯ : ಒಂದು ದಿನ ಯಶೋದೆ ಕೃಷ್ಣನನ್ನು ಬಂಡಿಯ ಕೆಳಗೆ ಮಲಗಿಸಿದ್ದಳು. ಅದು ನಿಜವಾದ ಬಂಡಿಯಾಗಿರಲಿಲ್ಲ. ಕಂಸನ ಅನುಚರನಾದ ಶಕಟಾಸುರ(ಶಕಟಾಕ್ಷ) ಆ ಬಂಡಿಯ ರೂಪದಲ್ಲಿದ್ದು ಬಾಲಕೃಷ್ಣನನ್ನು ಕೊಲ್ಲಲು ಹವಣಿಸಿದ್ದ. ಆದರೆ ಶ್ರೀಕೃಷ್ಣ ಆ ಬಂಡಿಯನ್ನು ಒದ್ದು ಪುಡಿಗಟ್ಟಿ ಶಕಟಾಕ್ಷನನ್ನು ಕೊಂದ. ಮತ್ತೊಮ್ಮೆ ಸುಂಟರಗಾಳಿಯ ರೂಪದ ತೃಣಾವರ್ತನೆಂಬ ರಾಕ್ಷಸ ಕೃಷ್ಣನನ್ನು ಗಾಳಿಯಲ್ಲಿ ಎತ್ತರಕ್ಕೆ ಕೊಂಡು ಹೋದ. ಎತ್ತರಕ್ಕೆ ಹೋದಮೇಲೆ ಕೃಷ್ಣ ಇದ್ದಕ್ಕಿದ್ದಂತೆ ಭಾರನಾಗಿ ಆ ತೃಣಾವರ್ತನನ್ನು ಕೊಂದು ಹಾಕಿದ.

ಗರ್ಗೋಽಥ ಶೌರಿಣಾದಿಷ್ಟಶ್ಚಕಾರ ಕ್ಷತ್ರಿಯೋಚಿತಾನ್ |
ಸಂಸ್ಕಾರಾನ್ ನಾಮ ಚಾಮುಷ್ಯ ಸಬಲಸ್ಯ ವ್ರಜಂ ಗತಃ ||25||
ತಾತ್ಪರ್ಯ : ಗರ್ಗಾಚಾರ್ಯರು ವಸುದೇವನ ಕುಲಪುರೋಹಿತರು. ವಸುದೇವನು ತನ್ನ ಮಗ ನಂದಗೋಕುಲದಲ್ಲಿರುವ ವಿಷಯವನ್ನು ಗರ್ಗಾಚಾರ್ಯರಿಗೆ ತಿಳಿಸಿ ಅವನಿಗೆ ನಾಮಕರಣಾದಿ ಸಂಸ್ಕಾರಾದಿಗಳನ್ನು ಮಾಡುವಂತೆ ಕೇಳಿಕೊಂಡನು. ಗರ್ಗಾಚಾರ್ಯರು ಗೋಕುಲಕ್ಕೆ ಹೋಗಿ ಅಲ್ಲಿರುವ ಬಲರಾಮ-ಕೃಷ್ಣರಿಗೆ ಕ್ಷತ್ರಿಯೋಚಿತವಾದ ಸಂಸ್ಕಾರಗಳನ್ನು ಮಾಡಿ ನಾಮಕರಣವನ್ನು ಮಾಡಿದರು.

ಪ್ರಾಂಗಣೇ ರಿಂಖಣಂ ಕುರ್ವನ್ ಅರ್ಭಕೈಸ್ಸಹ ಮಾಧವಃ |
ಲೀಲಾಭಿರ್ಭಾವಗರ್ಭಾಭಿರ್ಜನಮಾನಂದಯನ್ ಬಭೌ ||26||

ತಾತ್ಪರ್ಯ : ಬಾಲಕೃಷ್ಣ ಈಗ ಬೆಳೆಯುತ್ತಿದ್ದಾನೆ. ಹೊಸ್ತಿಲು ದಾಟಿ ಅಂಗಳಕ್ಕೆ ಬಂದು ಅಂಬೆಗಾಲಿಕ್ಕುತ್ತಿದ್ದಾನೆ. ಗೋಕುಲದ ಜನರಿಗೆ ಅವನೆಂದರೆ ಬಹಳ ಪ್ರೀತಿ. ಅವನ ಸುಂದರ ಮುಗ್ಧ ನಗು, ಭಾವಗರ್ಭಿತವಾದ ಚೇಷ್ಟೆಗಳು ಆ ಜನರಿಗೆ ಮುದವನ್ನುಂಟು ಮಾಡುತ್ತವೆ.

ಜಘಾಸ ಮೃತ್ತಿಕಾಂ ದೇವಃ ಕದಾಚಿಲ್ಲೀಲಯಾ ಹರಿಃ |
ಮಾತ್ರೋಪಾಲಬ್ಧ ಆಸ್ಯೇ ಸ್ವೇ ವ್ಯಾತ್ತೇ ವಿಶ್ವಮದರ್ಶಯತ್ ||27||
ತಾತ್ಪರ್ಯ : ಬಾಲಕನಾದ ಶ್ರೀಕೃಷ್ಣಪರಮಾತ್ಮನು ಒಂದು ದಿನ ಆಟವಾಡುತ್ತಾ ಮಣ್ಣನ್ನು ತಿಂದನು. ತಾಯಿ ಯಶೋದೆ ಗದರಿಸಿದಳು. ಬಾಲಕೃಷ್ಣ 'ನಾನು ಮಣ್ಣು ತಿಂದಿಲ್ಲವಮ್ಮ! ಗೆಳೆಯರು ಸುಳ್ಳು ಹೇಳುತ್ತಿದ್ದಾರೆ. ಬೇಕಾದರೆ ನನ್ನ ಬಾಯಿಯನ್ನು ನೋಡು' ಎಂದು ಹೇಳುತ್ತಾ ಬಾಯಿ ತೆರೆದನು. ತೆರೆದ ಬಾಯಿಯಲ್ಲಿ ಹದಿನಾಲ್ಕು ಲೋಕಗಳನ್ನು ಕಂಡು ಚಕಿತಳಾದಳು ಯಶೋದೆ.

ದಧ್ಯಮತ್ರಂ ವಿಭಜ್ಯೇಶಃ ಕದಾಚಿಚ್ಚಂದ್ರಸನ್ನಿಭಮ್ |
ನವನೀತಂ ಸಮಾದಾಯ ರಹೋ ಗತ್ವಾ ಜಘಾಸ ಚ ||28||
ತಾತ್ಪರ್ಯ : ಅದೊಂದು ದಿನ ಶ್ರೀಕೃಷ್ಣ ಮೊಸರಿನ ಗಡಿಗೆಯನ್ನು ಒಡೆದನು. ಚಂದ್ರನಂತೆ ಅತ್ಯಂತ ಶುಭ್ರವಾದ ಬೆಣ್ಣೆಯನ್ನು ಹಿಡಿದುಕೊಂಡು ಯಾರೂ ಇಲ್ಲದ ಜಾಗಕ್ಕೆ ಹೋಗಿ ತಿಂದನು.

ಜನನ್ಯೋಲೂಖಲೇ ಬದ್ಧಃ ಸೋಽರ್ಜುನಾವುದಮೂಲಯತ್ |
ನಲಕೂಬರಮಣಿಗ್ರೀವೌ ಮೋಚಯಾಮಾಸ ಶಾಪತಃ ||29||
ತಾತ್ಪರ್ಯ : ಮೊಸರಿನ ಗಡಿಗೆಯನ್ನು ಒಡೆದು ರಂಪಾಟ ಮಾಡುವ ಕೃಷ್ಣನನ್ನು ತಾಯಿ ಯಶೋದೆ ಹಗ್ಗದಿಂದ ಬಿಗಿದು ಒರಳಿಗೆ ಕಟ್ಟಿಹಾಕಿದಳು. ಶ್ರೀಕೃಷ್ಣ ಒಂದು ಕ್ಷಣ ಪೆಚ್ಚಾಗಿ ಕುಳಿತಿದ್ದ. ತಾಯಿ ಒಳಗೆ ಹೋದದ್ದೇ ತಡ, ಸಾಮಾನ್ಯರಿಂದ ಎಳೆಯಲಾಗದ ಭಾರವಾದ ಒರಳನ್ನು ಎಳೆದುಕೊಂಡು ಎರಡು ಮರಗಳ ಮಧ್ಯದಲ್ಲಿ ಹೋದ. ಜೋರಾಗಿ ಎಳೆದಾಗ ಎರಡೂ ಸರಳ ಮರಗಳು ಬುಡಸಹಿತ ಕಿತ್ತು ಬಿದ್ದವು. ಅಲ್ಲಿಂದ ನಲಕೂಬರ ಹಾಗೂ ಮಣಿಗ್ರೀವರೆಂಬ ಇಬ್ಬರು ಗಂಧರ್ವರು ಎದ್ದು ಬಂದು ನಮಸ್ಕರಿಸಿದರು. ಅವರು ಈ ಹಿಂದೆ ನಾರದರಿಂದ ಶಪ್ತರಾಗಿ ಮರಗಳಾಗಿದ್ದರು. ಇದೀಗ ಶ್ರೀಕೃಷ್ಣನಿಂದಾಗಿ ಕುಬೇರನ ಮಕ್ಕಳಾದ ಈ ನಲಕೂಬರ ಮತ್ತು ಮಣಿಗ್ರೀವರಿಗೆ ನಾರದರ ಶಾಪದಿಂದ ಮೋಕ್ಷದೊರೆಯಿತು.

ವೃಂದಾವನಂ ಯಿಯಾಸುಸ್ಸನ್ ನಂದಸೂನುರ್ಬೃಹದ್ವನೇ |
ಸಸರ್ಜ ರೋಮಕೂಪೇಭ್ಯೋ ವೃಕಾನ್ ವ್ಯಾಘ್ರಸಮಾನ್ ಬಲೇ
ತತ್ರೋತ್ಪಾತಭಿಯಾ ಗೋಪಾ ಆಪುರ್ವೃಂದಾವನಂ ವನಮ್ ||30||
ತಾತ್ಪರ್ಯ : ಶ್ರೀಕೃಷ್ಣ ಗೋಕುಲವನ್ನು ಬಿಟ್ಟು ವೃಂದಾವನವೆಂಬ ಬೇರೆ ಪ್ರದೇಶದಲ್ಲಿ ಹೋಗಿ ವಾಸಿಸಲು ಬಯಸಿದನು. ಆದರೆ ಗೋಕುಲದಲ್ಲಿದ್ದ ಗೋವಳರು ಇದಕ್ಕೆ ಸಮ್ಮತಿಸಲಿಲ್ಲ. ಆಗ ಶ್ರೀಕೃಷ್ಣ ತನ್ನ ಶರೀರದ ರೋಮಕೂಪಗಳಿಂದ ತೋಳಗಳನ್ನು ಸೃಷ್ಟಿಸಿದನು. ಈ ತೋಳಗಳು ವ್ಯಾಘ್ರಗಳಂತೆ ಬಲಿಷ್ಠಗಳಾಗಿದ್ದವು. ಗೋಕುಲ (ಬೃಹದ್ವನ) ದಲ್ಲಿ ಇದ್ದಕ್ಕಿದ್ದಂತೆ ತೋಳಗಳ ಕಾಟವನ್ನು ನೋಡಿ ಹೆದರಿದ ಗೋವಳರು ಗೋಕುಲವನ್ನು ಬಿಟ್ಟು ಹೊರಡಲು ನಿರ್ಧರಿಸಿದರು. ಶ್ರೀಕೃಷ್ಣ ಅವರನ್ನೆಲ್ಲ ಕರೆದುಕೊಂಡು ಬಂದು ವೃಂದಾವನವೆಂಬ ಕಾಡುಪ್ರದೇಶಕ್ಕೆ ಬಂದು ಸೇರಿದನು.

ಸ ಪಾಲಯನ್ ಗೋಪಕಬಾಲವೃಂದೈ-
ರ್ಬಲೇನ ಸಾಕಂ ಪಶುವತ್ಸಯೂಥಾನ್ |
ನಿಹತ್ಯ ವತ್ಸಾಸುರಮಾದಿದೇವೋ
ಬಕಂ ಚ ಗೋಪಾಲಕತಾಮವಾಪ ||31||

ತಾತ್ಪರ್ಯ : ವೃಂದಾವನದಲ್ಲಿ ಗೋವಳರ ಜೊತೆಗೆ ಶ್ರೀಕೃಷ್ಣ-ಬಲರಾಮರೂ ಕೂಡ ಹಸು, ಕರುಗಳನ್ನು ಮೇಯಿಸಲು ಹೋಗುತ್ತಿದ್ದರು. ಒಂದು ದಿನ ಹಸು, ಕರುಗಳ ಮಧ್ಯೆ ಕರುವಿನಂತೆ ಕಪಟಶರೀರವನ್ನು ಧರಿಸಿದ ವತ್ಸಾಸುರನೆಂಬ ರಾಕ್ಷಸನು ಶ್ರೀಕೃಷ್ಣನನ್ನು ಆಕ್ರಮಿಸಲು ಹೊಂಚುಹಾಕುತ್ತಿದ್ದನು. ಕಂಸನ ಭೃತ್ಯನಾದ ಆ ದುಷ್ಟ ವತ್ಸನನ್ನು ಶ್ರೀಕೃಷ್ಣ ಹಿಂಗಾಲುಗಳನ್ನು ಹಿಡಿದು ನೆಲಕ್ಕೆ ಅಪ್ಪಳಿಸಿ ಸಂಹರಿಸಿದನು. ಮತ್ತೊಂದು ದಿನ ಬಕಪಕ್ಷಿಯ (ಕೊಕ್ಕರೆಯ) ರೂಪದಲ್ಲಿದ್ದ ಬಕಾಸುರನೆಂಬ ದೈತ್ಯನು ಶ್ರೀಕೃಷ್ಣನನ್ನು ನುಂಗಿದನು. ಆದರೆ ಹೊಟ್ಟೆಗೆ ಇಳಿದ ಕೃಷ್ಣ ಅವನ ಕೊಕ್ಕೆಗಳನ್ನು ಸೀಳಿ ಆ ದುಷ್ಟದೈತ್ಯನನ್ನು ಸಂಹರಿಸಿದನು. ಹೀಗೆ ಗೋವುಗಳನ್ನು ರಕ್ಷಿಸುತ್ತಾ ಶ್ರೀಕೃಷ್ಣನು ಗೋಪಾಲಕನೆಂಬ ಹೆಸರನ್ನು ಹೊಂದಿದನು.

ಇಲ್ಲಿಗೆ ಶ್ರೀಮನ್ನಾರಾಯಣ ಪಂಡಿತಾಚಾರ್ಯರಿಂದ ವಿರಚಿತವಾದ ಮಣಿಮಂಜರೀ ಕಾವ್ಯದ ಮೂರನೇ ಸರ್ಗ ಮುಗಿಯಿತು.

|| ಮಧ್ವೇಶಾರ್ಪಣಮಸ್ತು ||